


# ಎಲ್ಲಕ್ಕೂ ಇದೆ ಅರ್ಥ

ಡಾ. ಸಿ. ರವೀಂದ್ರನಾಥ್

ಇಲ್ಲಿ
ಯಾರೂ ಮುಖ್ಯರಲ್ಲ
ಯಾರೂ ಅಮುಖ್ಯರಲ್ಲ
ಯಾವುದೂ ಯಃಕಶ್ಚಿತವಲ್ಲ!
**-ಕುವೆಂಪು**

'ಮಲೆಗಳಲ್ಲಿ ಮದುಮಗಳು' ಕಾದಂಬರಿಗೆ ಪ್ರವೇಶಿಕೆಯಾಗಿ ಕುವೆಂಪು ಅವರು ಬರೆದಿರುವ ಮಾತುಗಳು, ಆ ಕಾದಂಬರಿಯ ಸ್ವರೂಪವನ್ನು ಮಾತ್ರ ಹೇಳುತ್ತಿಲ್ಲ; ಸಾಹಿತ್ಯ ನಮಗೆ ಕರುಣಿಸುವ ಅರಿವನ್ನೂ ಕಾಣಿಸುತ್ತಿವೆ. ಸಾಹಿತ್ಯದ ಪ್ರಮುಖ ಕಾರ್ಯಸಾಧನೆಗಳಲ್ಲೊಂದು: ಕಟ್ಟಕಡೆಯ ವ್ಯಕ್ತಿಯನ್ನೂ ಸಮಾಜಕ್ಕೆ ಮುಖ್ಯವೆಂದು ತೋರಿಸುವುದು ಹಾಗೂ ಆ ವ್ಯಕ್ತಿಯನ್ನು ಕೇಂದ್ರಸ್ಥಾನಕ್ಕೆ ತಂದುನಿಲ್ಲಿಸುವುದು. ಯಾವುದನ್ನೂ ಮುಖ್ಯವೆಂದು ಭಾವಿಸದೆ, ಯಾವುದನ್ನೂ ಅಮುಖ್ಯವೆಂದು ತಿಳಿಯದಿರುವ ಪ್ರಜ್ಞೆಯನ್ನು ಬರಹಗಾರನೊಬ್ಬ ಕಲೆಯ ಮೂಲಕ ತನ್ನದಾಗಿಸಿಕೊಳ್ಳುತ್ತಾನೆ ಹಾಗೂ ಆ ತಿಳಿವನ್ನು ತನ್ನ ಕೃತಿಗಳ ಮೂಲಕ ಸಹೃದಯರಿಗೂ ದಾಟಿಸುತ್ತಿರುತ್ತಾನೆ.

ರಾಮಾಯಣದಲ್ಲಿ ಅಳಿಲಿಗೂ ಅಗಸನಿಗೂ ಮಹತ್ವದ ಸ್ಥಾನವಿದೆಯಷ್ಟೇ. ಆ ಅರಿವನ್ನು ಕನ್ನಡ ಸಾಹಿತ್ಯ ಕೂಡ ಉದ್ದಕ್ಕೂ ಅನುಸರಿಸಿದೆ. ಪ್ರಸಿದ್ಧರ ಕಥೆಯನ್ನು ಚಿತ್ರಿಸುವಷ್ಟೇ ಉತ್ಸಾಹವನ್ನು ಯಾರೂ ಅರಿಯದ ವೀರರ ಚಿತ್ರಣದಲ್ಲೂ ಕನ್ನಡ ಕವಿಗಳು ತೋರಿದ್ದಾರೆ. ಸಮಷ್ಟಿಹಿತಕ್ಕೆ ಪೂರಕವಾದ ಈ ವಿವೇಕವನ್ನು, 'ಯಾವುದೂ ಯಃಕಶ್ಚಿತವಲ್ಲ' ಎನ್ನುವ ನಿಲುವನ್ನು, ಕನ್ನಡ ಸಾಹಿತ್ಯ ಉದ್ದಕ್ಕೂ ಪ್ರತಿಪಾದಿಸಿದೆ.

ಕುವೆಂಪು ಹೇಳುತ್ತಾರೆ: 'ಇಲ್ಲಿ, ಅವಸರವೂ ಸಾವಧಾನದ ಬೆನ್ನೇರಿದೆ!', 'ಇಲ್ಲಿ, ಎಲ್ಲಕ್ಕೂ ಇದೆ ಅರ್ಥ, ಯಾವುದೂ ಅಲ್ಲ ವ್ಯರ್ಥ, ನೀರೆಲ್ಲವೂ ತೀರ್ಥ!'. ಸಾಹಿತ್ಯದಿಂದ ಬದುಕಿಗೆ ದೊರೆಯುವ ಪ್ರಸನ್ನಭಾವವನ್ನು ಹಾಗೂ ಬದುಕು ಒಳಗೊಳ್ಳಬೇಕಾದ ಸಮಗ್ರಭಾವವನ್ನು ಇದಕ್ಕಿಂಥ ಸೊಗಸಾಗಿ ಹೇಳಲು ಸಾಧ್ಯವೆ?

**-ಮಹತಿ**

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Indusial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68